

# ಗಡಿನಾಡಿನ ಜಲಪಾತ

★ ಚಿತ್ರ ಬರಹ: ಶ್ರೀಶೈಲಗೌಡ ಹೊಸಮನಿ



ಬಿಸಿಲ ನಾಡಿನಲ್ಲಿ ಮಲೆನಾಡನ್ನು ನೆನಪಿಸುವ ಶಾಂತ ಪ್ರಕೃತಿಯ ಸೊಬಗು. ಶ್ವೇತ ವರ್ಣದ ಜಲರಾಶಿ ಧುಮ್ಮಿಕ್ಕುವ ಸೌಂದರ್ಯ. ಭೋರ್ಗಗರೆಯುವ ಶಬ್ದ ದೂರದಿಂದಲೆ ಕೇಳಿಸುತ್ತದೆ. ಸುಮಾರು 15 ಅಡಿ ಎತ್ತರದಿಂದ ಧುಮುಕುವ ಈ ಜಲಪಾತವು ಕಣ್ಮನ ತಣಿಸುವಂತಹ ಸುಂದರ ರಮಣೀಯ ದೃಶ್ಯ.

ಇದು ನಮ್ಮ ನೆರೆಯ ರಾಜ್ಯ ಆಂಧ್ರಕ್ಕೆ ಸೇರಿರುವ ಅನಂತಪುರ ಜಿಲ್ಲೆಯ ಪೆನ್ನವೊಬಳಂನಲ್ಲಿದೆ. ಪೆನ್ನವೊಬಳಂ ಹೆಸರು ಬರಲು ಅಲ್ಲಿರುವ ಲಕ್ಷ್ಮೀ ನರಸಿಂಹ ಸ್ವಾಮಿ ಪಾದಕ್ಕೆ ಪೂಜೆ ಮಾಡುವ ನೀರು ಕಾರಣ. ಲಕ್ಷ್ಮೀ ನರಸಿಂಹಸ್ವಾಮಿಯ ಪಾದದಡಿಯಲ್ಲಿರುವ ಸುರಂಗ ಮಾರ್ಗದಿಂದ ಪೆನ್ನಾ ನದಿಗೆ ಸೇರುತ್ತದೆ ಈ ನೀರು. ಪೆನ್ನಾ ಅಂದರೆ ನದಿಯ ಹೆಸರು, ಹವೊ ಅಂದರೆ ಪಾದ ಬಿಲಂ; ಅಂದರೆ ಸುರಂಗ. ಹಾಗಾಗಿ ಇದಕ್ಕೆ ಪೆನ್ನವೊಬಳಂ ಅಂತ ಹೆಸರು ಬಂದಿತು ಎಂಬುದು ಐತಿಹ್ಯ.

ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನವನ್ನು ವಿಜಯನಗರ ಸಾಮ್ರಾಜ್ಯ ದೊಡೆಯ ಸದಾಶಿವರಾಯ ಕಟ್ಟಿಸಿದನಂತೆ. ಇದೊಂದು ಐತಿಹಾಸಿಕ ತಾಣವೂ ಹೌದು; ಪ್ರಕೃತಿಯ ಸೌಂದರ್ಯದ ತಾಣವೂ ಕೂಡಾ. ವರ್ಷದ ಜೂನ್‌ನಿಂದ ನವೆಂಬರ್‌ವರೆಗೂ ಈ ಜಲಪಾತ ಧುಮ್ಮಿಕ್ಕುತ್ತದೆ.

ಬಳ್ಳಾರಿಯಿಂದ 62 ಕಿ.ಮೀ ದೂರ ಇರುವ ಈ ಜಲಪಾತಕ್ಕೆ ಹೋಗುವವರು ಅನಂತಪುರ ಮಾರ್ಗ ಹಿಡಿಯಬೇಕು. ಮಾರ್ಗ ಮಧ್ಯೆ ಪೆನ್ನವೊಬಳಂ ಸಿಗುತ್ತದೆ. ಇಲ್ಲಿಗೆ ಬಸ್ ಸೌಲಭ್ಯವಿದೆ. ಪ್ರವಾಸಿಗರಿಗೆ ಉಳಿದುಕೊಳ್ಳಲು ವಸತಿ ವ್ಯವಸ್ಥೆಯೂ ಇದೆ. ಪ್ರತಿ ಕೊಠಡಿಗೆ 250 ರೂಪಾಯಿ ಶುಲ್ಕ. ಬಳ್ಳಾರಿ ಸುತ್ತಲಿನ ಪ್ರವಾಸಿಗರಿಗೆ ಒಂದು ದಿನದ ಪಿಕ್‌ನಿಕ್‌ಗೆ ಇದು ಹೇಳಿ ಮಾಡಿಸಿದ ತಾಣ.